doc - 523
T-P-2

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಆ ಫೋ ೀ ಕಾ ಫಾ ರ್ಮ ಸಿ

ಅ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Regd No M 1299 — SRI — 29—1—1958

42nd Year - 'Satyavadi' Mysore

ಸತ್ಯವಾದಿ

ಸಂಪಾದಕರು— ಅರಮನೆ ಸಿಂಹೇದಾರ್ ಎ. ವಿ. ಸಚ್ಚಿದಾನಂದಯ್ಯರು [ಬಿಡಿಪ್ರತಿ 3 ನೈ

ಪ್ರಮುಖ ವರ್ತಮಾನಗಳಿಗೆ

ಆಕರ್ಷಣೀಯ ಲೇಖನಗಳಿಗೆ

" ಸತ್ಯವಾದಿ " ಪತ್ರಿಕೆಯನ್ನು

ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ರೂ. 50 ಲಕ್ಷ ದೇವಣಿ ಕೊಡಲು ಅಲ ಉಳಿತಾಯಕ್ಕೆ ಕಾರ್ಮಿಕರಿಂದ ಸಿದ್ಧನೆಂದು ಮುಂದ್ರಾ ಹೇಳಿಕೆ ರೂ. 12 ಲಕ್ಷ ಸಂಗ್ರಹ

ಬೊಂಬಾಯಿ 28 —. ಜಾಗ್ವಾ ಸಮಿತಿ ಮುಂದೆ ಶ್ರೀ ಹರಿದಾಸ ಮುಂದ್ರ ಅವರು ಪದೇ ಪದೇ ಹೇಳುತ್ತಾ, ಕಳೆದ ಜೂನಿನಲ್ಲಿ ತನ್ನ 6 ಸಂಸ್ಥೆಗಳಲ್ಲಿ ಜೀವ ವಿಮಾ ಸಂಸ್ಥೆ ರೂ ಒಂದೂಕಾಲು ಕೋಟಿಯ ಷೇರನ್ನು ಇತ್ತೀಚಿಗೆ ತನ್ನ ಷೇರು ಗಳ ವ್ಯವಹಾರ ಬೆಲೆಯನ್ನು ಕೊಡಲಿಲ್ಲ ವೆಂದೂ, ಕಾರ್ಪೊರೇಷನ್ನಿಂದ ರೂ 10 ಲಕ್ಷ ಪ್ರೀಮಿಯಂ ದಂದಲ್ಲಿ ಷೇರುಗಳನ್ನ ವಾಪಸು ತೆಗೆದುಕೊಳ್ಳುವದಾಗಿಯೂ, ಆ ಬಗ್ಗೆ ರೂ 50 ಲಕ್ಷ ದೇವಣಿ ಇಡು ವದಾಗಿಯೂ ತಿಳಿಸಿದರು.

ಮೈಸೂರಿನಿಂದ ಮಹಿಳಾ ಸದಸ್ಯೆ

ನವ ದೆಹಲಿಯಿಂದ ಬಂದಿರುವ ವಂದಿ ಯಂತೆ ಅಖಿಲ ಭಾರತ ಕಾಂಗ್ರೆಸು ಕಾರ್ಯಕಾರಿ ಸಮಿತಿಗೆ ಮೈಸೂರು ಅಥವಾ ರಾಜಸ್ಥಾನದಿಂದ ಓರ್ವ ಮಹಿಳೆಯನ್ನು ಸದಸ್ಯಳಾಗಿ ತೆಗೆದುಕೊಳ್ಳುವದಾಗಿ ಗೊತ್ತಾಗಿದೆ

ಕೇರಳದಲ್ಲಿ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸಿನ ಮುಂದಿನ ಅಧಿವೇಶನ ಕೇರಳದಲ್ಲಿ ಖಂಡಿತ ನಡೆಯುವದು

ಮಹಿಳಾ ನಿರುದ್ಯೋಗಿಗಳು

ನವೆಂಬರಿನ ಸಂಖ್ಯೆಯಂತೆ ಕೇರಳ ದಲ್ಲಿ ಉದ್ಯೋಗ ಅಭ್ಯರ್ಥಿಗಳಲ್ಲಿ ಮಹಿಳೆಯರು ಶೇಕಡ ನೂಂಬತ್ತು ಹೆಚ್ಚಿರುವರು

ವಿಯಟ್ನಾಂ ಪ್ರಜಾಸ್ವಭುತ್ವದ ರಾಷ್ಟ್ರಪತಿ ಡಾ|| ಹೋ ಚಿ ಮಿನ್ ಫೆಬ್ರವರಿ 5 ನೇ ತಾ|| ನವ ದೆಹಲಿಗೆ ಆಗಮಿಸುವರು

ಕಾಶ್ಮೀರ ದಿನಾಚರಣೆ

ಫೆಬ್ರವರಿ 9 ನೆಯ ತಾ|| ಕಾಶ್ಮೀರ ಮತ್ತು ಪೂರ್ವ ಬಂಗಾಳ ದಿನ ಆಚರಿಸಬೇಕೆಂದು ಅಖಿಲ ಭಾರತ ಹಿಂದೂ ಮಹಾಸಭೆ ತನ್ನ ಸಮಿತಿಗಳಿಗೆ ಸೂಚಿಸಿದೆ

ರೀಟಾಗೆ 5 ನೇ ಮದುವೆ

ಪ್ರಪ್ರಥಮ ಬಾರಿಗೆ ಮದುವೆ ಆಗಲಿರುವ ಚಿತ್ರೋತ್ಪಾದಕ ಜೇಂಸ್ ಹಿಲ್‌ರನ್ನು ಸಿನಿಮಾ ತಾರೆ ರಿಟಾ ಹೇವರ್ತ್‌ಳು ಮದುವೆ ಆಗುವಳೆಂದು ಸಂತ ಮೊನಿಕಾ ವಾರ್ತೆ ಇದು ಅವಳ 5 ನೇ ಮದುವೆ

ಜನ ಸಂಘದ ಅಧಿವೇಶನ

ಏಪ್ರಿಲ್ ಮೊದಲನೆಯ ವಾರದಲ್ಲಿ ಪಂಜಾಬಿನ ಹೋಷಿಯಾಪುರದಲ್ಲಿ ಭಾರತೀಯ ಜನಸಂಘದ ವಾರ್ಷಿಕಾಧಿವೇಶನ ಸೇರಲಿದೆ 2 ಸಹಸ್ರ ಡೆಲಿಗೇಟು ಗಳು ಆಗಮಿಸುವ ನೀರೀಕ್ಷೆ ಇದೆ

ಭಾರತೀಯ ಶಿಕ್ಷಕಿ

ಕರ್ನಾಟಕದಲ್ಲಿ ಜನಿಸಿ, ಬೆಂಗಳೂರು ಮತ್ತು ಮಂಗಳೂರಿನಲ್ಲಿ ಶಿಕ್ಷಣ ಪಡೆದು ಮದ್ರಾಸಿನಲ್ಲಿ ಬಿ ಎ ಮಾಡಿದ ಭಾರತೀಯ ಮಹಿಳೆ ಇಂಗ್ಲೆಂಡಿನ ಇಂಗ್ಲೀಷು ಪಬ್ಲಿಕ್ ಸ್ಕೂಲಿನಲ್ಲಿ ಶಿಕ್ಷಕಳಾದಳು ಹೆಸರು ಶ್ರೀಮತಿ ವಾಚಕೊ ಭಾರತೀಯ ಮಹಿಳೆ ನೇಮಕವಾದದ್ದು ಇದೇ ಮೊದಲು

ಪಾಯಂ ಪ್ರದರ್ಶನ

2 ಸಹಸ್ರ ವರ್ಷಗಳ ಹಿಂದಿನ ಆರ್ಮೀನಿಯನ್ ನಾಟಕಶಾಲೆಯ ಇತಿಹಾಸವನ್ನು ಕುರಿತು ಸಿದ್ಧಗೊಳಿಸಲಾದ ಒಂದು ಪಾಯಂ ಪ್ರದರ್ಶನವನ್ನು ಯೆರೆವಾನಿನಲ್ಲಿ ತೆರೆಯಲಾಗಿದೆ

ಬೇಗ ಬೇಗ ಮುಗಿಯಬೇಕು

ಮೈಸೂರು ಪ್ರಾಂತದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ದಾಸ್ ಗುಪ್ತರವರು ಹೈಸನದ ವಕೀಲ ಸಂಘದಲ್ಲಿ ಭಾಷಣ ಮಾಡುತ್ತಾ, ವೊಕದ್ದಮೆಗಳು ಬೇಗ ಬೇಗ ಮುಗಿಯಬೇಕು ಎಂದರು

ನವ ಭಾರತ ನಿರ್ಮಿಸಿ

ಜನ್ಮು 26— ಪ್ರಜಾರಾಜ್ಯದ ದಿನ ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ, ಜಮ್ಮು ಕಾಶ್ಮೀರದ ಸಾದರ್ ಇರಿಯಾಸಾಕರಾದ ಯುವರಾಜ ಕರ್ಣ ಸಿಂಗರು— ನಾವು ಈಗ ಭಾರೀ ರಾಷ್ಟ್ರದ ಭಾಗವಾಗಿದ್ದೇವೆ, ನಮ್ಮ ಸ್ವಪ್ನದ ನವಭಾರತವನ್ನು ರಚಿಸುವ ಭಾರಿ ಕಾರ್ಯದಲ್ಲಿ ನಿರತರಾಗಬೇಕು, ಎಂದರು.

ವಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿರೋಮಣಿ
ಸಂಪತ್ಕೃಷ್ಣ ಜೋಯಿಸರಿಂದ
30 ದಶಮಿ ರೋಹಿಣಿ

ಕೊಯಮುತ್ತೂರು ಮತ್ತು ಅದರ ಸುತ್ತಮುತ್ತ ಇರುವ 45 ಬಟ್ಟೆ ಗಿರಣಿಗಳ 40 ಸಹಸ್ರ ಕಾರ್ಮಿಕರು ಅಲ್ಪ ಉಳಿತಾಯ ಯೋಜನೆಗೆ ಬೇಗನೆ ರೂ 12 ಲಕ್ಷ ಹಾಕಲಿರುವರು

ವಿದ್ಯುತ್ ನೌಕರರ ಒತ್ತಾಯ

ಬೆಂಗಳೂರು 28 — ವೇತನ ಪುನರ್ವಿಮರ್ಷೆ ಮತ್ತು ತಾತ್ಕಾಲಿಕ ಪರಿಹಾರಗಳ ಬಗ್ಗೆ ಸಮಿತಿಯೊಂದನ್ನು ರಚನೆ ಮಾಡಬೇಕೆಂದು ಮೈಸೂರು ಪ್ರಾಂತ ವಿದ್ಯುತ್ ಸಮಿತಿ ಕೆಲಸಗಾರರ ಸಂಘ ಸಮಿತಿಗೆ ಒತ್ತಾಯ ಮಾಡಿದೆ

ಸೇನೆಗಳಿಗೆ ಘರ್ಷಣೆ

ಟೆಲ್ ಅವೀವ್‌ನ ಇಸ್ರೇಲಿ ಕೇಂದ್ರ ಕಚೇರಿ ವಂದಿಯಂತೆ ಡಾರ್ಡ ಗ್ರಾಮದ ಬಳಿ ಸಿರಿಯ ಮತ್ತು ಇಸ್ರೇಲಿ ಸೇನೆ ಕಳೆದ ರಾತ್ರಿ ಹೊಡೆದಾಡಿವೆ

ಬೆಂಕಿ ಅನಾಹುತ

ಪಾಂಡವಪುರ ತಾಲ್ಲೂಕಿನ ಕೆನ್ನಾಲ ಗ್ರಾಮದಲ್ಲಿ ಬೆಂಕಿ ಅನಾಹುತದಲ್ಲಿ 11 ಹರಿಜನರ ಗುಡಿಸಲುಗಳು ಭಸ್ಮವಾದವು ನಷ್ಟ ರೂ 6 ಸಾವಿರ ಅಂದಾಜಾಗಿದೆ

ನಿವೃತ್ತಿ ವಯಸ್ಸು ಹೆಚ್ಚಳ

ತುಮಕೂರಿನ ವಾಧ್ಯಮಿಕ ಶಾಲೆ ಉಪಾಧ್ಯಾಯರು ಶ್ರೀ ಎಸ್ ಎಸ್ ಪಾಗೇಶ ರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಉಪಾಧ್ಯಾಯರ ನಿವೃತ್ತಿ ವಯಸ್ಸನ್ನು 58 ಕ್ಕೇರಿಸಬೇಕೆಂದೂ, ವೇತನವನ್ನು ಗುಮಾಸ್ತರಿಗೆ ಕೊಡುವಷ್ಟು ಕೊಡಬೇಕೆಂದೂ ನಿರ್ಣಯ ಮಾಡಿರುವರು

ಗೋವಧೆ ನಿಲ್ಲಬೇಕು

(ಸ್ವಂ. ಸು ತಂತಿ)

ಜನವರಿಯಾ 28— ಭಾರತದ ನಿಜವಾದ ಪ್ರಗತಿಯ ಅಭಿವೃದ್ಧಿಗೆ ಗೋಹತ್ಯೆಯು ಸಂಪೂರ್ಣವಾಗಿ ನಿಲ್ಲಬೇಕು, ಎಂದು ಗೌಹತಿಗೆ ಚಿಕ್ಕ ಭೇಟಿಗಾಗಿ ವಿಮಾನದಲ್ಲಿ ಬಂದ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು ತಾ|| 24 ರಂದು ಅಲ್ಲಿ ನಡೆದ ಪ್ರಚಂಡ ಸಭೆಯಲ್ಲಿ ತಿಳಿಸಿದರು. ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಧೇಬಾರರು ಜಗದ್ಗುರುಗಳಿಗೆ ಗೌರವ ಸಲ್ಲಿಸಿದರು ಮತ್ತು ಅಮೋಘ ಮೆರವಣಿಗೆಯಿಂದ ಜಗದ್ಗುರುಗಳು ಗೌರವಿಸಲ್ಪಟ್ಟರು; ಕಲ್ಕತ್ತಾದಲ್ಲಿ ಮಾನ್ಯ ನ್ಯಾಯಾಧೀಶರಾದ ಶ್ರೀ ರಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಭಾರೀಸಭೆಯಲ್ಲಿ ಜಗದ್ಗುರುಗಳವರಿಗೆ ಮಾನಪತ್ರ ಅರ್ಪಿಸಲಾಯಿತು: ಇಲ್ಲಿಗೆ ಜಗದ್ಗುರುಗಳವರು ಕಲ್ಕತ್ತಾದಲ್ಲಿನ 15 ದಿವಸಗಳ ಅಧ್ಯಾತ್ಮಿಕ ಜಾಗೃತಿಯ ಕಾರ್ಯಕ್ರಮವು ಪರಿಸಮಾಪ್ತಿಗೊಂಡಿತು. ಜಗದ್ಗುರುಗಳವರು ನಿನ್ನೆ ಜನವರಿಯಾಕ್ಕೆ ಆಗಮಿಸಿದರು; ಅವರು ಭಾರಿ ಮೆರವಣಿಗೆಯಿಂದ ಸ್ವಾಗತಿಸಲ್ಪಟ್ಟರು. ಜಗದ್ಗುರುಗಳವರು ತಾ|| 6 ರಂದು ವಿಮಾನದಲ್ಲಿ ಅಹಮದಾಬಾದಿಗೆ ಕಲ್ಕತ್ತಾ, ನಾಗಪುರ ಬೊಂಬಾಯಿ ಮೂಲಕ ದಯಮಾಡಿಸುವರು.

ಲೋಹಿಯಾ ಸಭೆಯಿಂದ ಹೊರಹೋದರು

ನಾಗ್ಪುರದ ಲಾ ಕಾಲೇಜಿನಲ್ಲಿ ಡಾ|| ಲೋಹಿಯಾ ಅವರು, ತಾವು ಹಿಂದಿಯಲ್ಲಿ ಭಾಷಣ ಮಾಡುವುದಾಗಿಯೂ, ಇಂಗ್ಲೀಷಿಗೆ ಅದನ್ನು ಕೇಳಲು ಇಚ್ಛೆ ಇಲ್ಲವೋ ಅವರು ಹೊಂಟುಹೋಗಬಹುದೆಂದೂ ಹೇಳಿದರು. ಕೆಲವು ವಿದ್ಯಾರ್ಥಿಗಳು ಇಂಗ್ಲೀಷಿನಲ್ಲಿ ಮಾತನಾಡಬೇಕೆಂದು ಕೇಳಿದರು. ಲೋಹಿಯಾರವರು ಒಪ್ಪಲಿಲ್ಲವಾಗಿ ಸುಮಾರು 12 ಮಂದಿ ಹೊರಕ್ಕೆ ಹೊಂಟುಹೋದರು.

ಕಳೆದ ವರ್ಷ ಜುಲೈ 1 ರಿಂದ ಅರಂಭವಾದ ಕಾಫಿ ಬೋರ್ಡಿನ ಕಾಫಿ ಗೃಹಗಳನ್ನು ಮುಚ್ಚುವ ಕ್ರಮವು, ಕ್ರಮಕ್ರಮವಾಗಿ ಮುಂದುವರಿದು ಈ ವರ್ಷದಲ್ಲಿ ಮುಗಿಯುವುದಾಗಿ ಬೆಂಗಳೂರು ವಾರ್ತೆ

ಅರಮನೆಗೆ ಪ್ರವೇಶವಿಲ್ಲ

ಮೈಸೂರು ನಗರದಲ್ಲಿ ಕಾಣಿಸಿಕೊಂಡಿರುವ ದಡಾರ ಮತ್ತು ಸಿಡುಬು ರೋಗದ ಕಾರಣದಿಂದಾಗಿ ಅರಮನೆಯನ್ನು ನೋಡಬಯಸುವ ಪ್ರೇಕ್ಷಕರಿಗೆ ಮುಂದಿನ 2 ಭಾನುವಾರ ಪ್ರವೇಶವಿರುವುದಿಲ್ಲ

ಮಾಸ್ಕೋ 27— ಸತ್ತ 5-6 ನಿಮಿಷಗಳಲ್ಲಿ ಮಾನವನನ್ನು ಬದುಕಿಸಬಹುದೆಂದು ರಷ್ಯಾ ವಿಜ್ಞಾನಿ ಹೇಳಿರುವನ್ನು.

o o

ಲಂಡನ್ನಿನಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಶುಕ್ರವಾರ ರಾತ್ರೆ ನಡೆಸಿದ ಸಂಸ್ಕೃತಿ ಪೂಜೆಯನ್ನು ಬ್ರಿಟನ್ನಿನಲ್ಲಿರುವ ಬೌದ್ಧ ರಾಯಭಾರಿಯು ಓಂಗ್ ಸೊ ಉದ್ಘಾಟಿಸಿದರು.

o o

ಹಕ್ಕಿಗಳಂತೆ ರೆಕ್ಕೆ ಬಡಿಯುತ್ತ ಹಾರಾಡುವ ವಿಮಾನ ಯಂತ್ರಗಳನ್ನು 'ಆರ್ನಿಥಾಪ್ಟರ್ಸ್' — ಸೋವಿಯೆತ್ ವಿಮಾನ ತಿರ್ಮಾತೃಗಳು ಬಹುಸಂಖ್ಯೆಯಲ್ಲಿ ತಯಾರಿಸಿದ್ದಾರೆ

**

ವಿನೋದ

ಚಲಚ್ಚಿತ್ರಗಳಿಗೆ ಕಥೆ ಬರೆಯುವವ ಸೊಬ್ಬನನು ಡಾಕ್ಟರಿಗೆ ಫೋಕ್ ಮಾಡಿ ತನ್ನ ಚಿಕ್ಕ ಹುಡುಗನು ತನ್ನ ಫೌಂಟೆನ್ ಪೆನ್ ನುಂಗಿರುವುದಾಗಿ ತಿಳಿಸಿದನು.

ಡಾಕ್ಟರನು ತಾನು ಕೂಡಲೇ ಬರ್ತೇನೆಂದಾಗಿ ತಿಳಿಸಿದ್ದೆಲ್ಲದೆ, ಈಗ ನೀವು ಏನು ಮಾಡುತ್ತಿರುವಿರಿ ಎಂದು ಕೇಳಿದನು.

ಅದಕ್ಕೆ ಅತನು, ನಾನು ಪೆನ್ಸಿಲಿನಲ್ಲಿ ಬರೆಯುತ್ತಿದ್ದೇನೆ ಎಂದು ಉತ್ತರಕೊಟ್ಟನು.

ಶಕ್ತಿಸುಧಾ

— ಉತ್ಪನ್ನ ಟಾನಿಕ್ —

ವುಡ್‌ಲ್ಯಾಂಡ್ಸ್ ಜಯಪ್ರದ 3 ನೇ ವಾರ

ದೇವಾನಂದ — ಕಲ್ಪನಾ ಕಾರ್ತಿಕ್ — ಶಶಿಕಲಾ ಪಾತ್ರವಹಿಸಿರುವ

ನೌದೊಗ್ಯಾರ = Nau Do Gyara

ಅತ್ಯಮೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ— ಕೀರ್ತಿಯುತ 6 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗಂ, ನಾಗೇಶ್ವರರಾವ್, ಲೀಲಾಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿದಿನ 3 ಆಟಗಳು

ಉಮಾ ಟಾಕೀಸ್ 25—1—58 ರಿಂದ

ಕಾವೇರಿ (ತಮಿಳು) [ದಿನ 3 ಆಟಗಳು]

ನಟವರ್ಗ— ಶಿವಾಜಿ ಗಣೇಶ್, ಪದ್ಮಿನಿ, ಕೃಷ್ಣ, ಮಧುರಂ

ಬೆಳಿಗಿನ ಪ್ರದರ್ಶನ 10—30 ಕ್ಕೆ — ತಾ || 31 ರಿಂದ 3 ದಿವಸಗಳು ಮಾತ್ರ

PATHFINDER (Technicolor Picture)

SHAKTI SUDHA

A Superb Tonic

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣಾ ಕಾರ್ಯಕ್ಕೆ ಹೆಚ್ಚು ಪ್ರಚಾರ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೊಬಲಿಗರಾಗಿರಿ

ಗೋರಕ್ಷಣೆ, ವ್ಯಾಪಾರದಯೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ರೂ 10 (ಒಂದ್ರೂಪಾಯಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ: ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed& Published by Dharma Prachar ... Krishna Rao, at the Satyavadi Press Chamarajapuram Mysore